ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 468
ಮಾನ್ಯ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.
ಉತ್ತರಿಸುವ ದಿನಾಂಕ : 06.03.2020

ಕ್ರಸಂ	ಪ್ರಶ್ನೆ	ಉತ್ತರ
ಅ.	ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 (ತಿದ್ದುಪಡಿ) ಅನ್ವಯ ಪೋಷಣೆ ಮತ್ತು ರಕ್ಷಣೆಗೆ ಅವಶ್ಯವಿರುವ ಮಕ್ಕಳ ಅನುಕೂಲಕ್ಕಾಗಿ ಬಾಲಮಂದಿರಗಳನ್ನು ತೆರೆದಿದ್ದು, ಅದರಲ್ಲಿ ಮೂಲಭೂತ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಕ್ಕಳ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ರನ್ವಯ ಪೋಷಣೆ ಮತ್ತು ರಕ್ಷಣೆಗೆ ಅವಶ್ಯವಿರುವ ಮಕ್ಕಳ ಅನುಕೂಲಕ್ಕಾಗಿ ಬಾಲಮಂದಿರಗಳನ್ನು ತೆರೆದಿದ್ದು, ಅದರಲ್ಲಿನ ನಿವಾಸಿಗಳ ಉಪಯೋಗಕ್ಕೆ ವಸತಿ, ಆಹಾರ, ಹಾಸಿಗೆ, ಹೊದಿಕೆ, ಉಡುಪು, ಹೊರಾಂಗಣ ಆಟ, ಒಳಾಂಗಣದ ಕ್ರೀಡಾ ಸಾಮಗ್ರಿ ಒದಗಿಸಲಾಗುತ್ತಿದೆ ಹಾಗೂ ಮಕ್ಕಳ ಸುರಕ್ಷತೆ ಕಲ್ಪಿಸಲಾಗಿದೆ. ಮೂಲಭೂತ ಸೌಲಭ್ಯಗಳು ಇಲ್ಲದ ಬಗ್ಗೆ ಮಾಹಿತಿ ಬಂದಾಗ ಮೂಲಭೂತ ಸೌಕರ್ಯ ಒದಗಿಸಲು ಕ್ರಮವಹಿಸಲಾಗುತ್ತಿದೆ. ಮುಂದುವರೆದು, ಸಂಸ್ಥೆಯಿಂದ ಅಗತ್ಯವಿರುವ ಸ್ವಂತ ಕಟ್ಟಡ ನಿರ್ಮಾಣ, ಕಟ್ಟಡ ದುರಸ್ತಿ ಕುರಿತು ಸ್ವೀಕೃತವಾದ ಪ್ರಸ್ತಾವನೆಗೆ ಆದ್ಯತೆ ಮೇರೆಗೆ ಕ್ರಮವಹಿಸಲಾಗುತ್ತಿದೆ.
ಆ.	ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬಾಲಮಂದಿರ ಗಳಿಂದ ಓಡಿಹೋದ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಒಟ್ಟು 275 ಮಕ್ಕಳು ಬಾಲಮಂದಿರಗಳಿಂದ ಕಾಣೆಯಾಗಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ
ಇ.	ಇಲ್ಲಿಯವರೆಗೆ ಎಷ್ಟು ಮಕ್ಕಳನ್ನು ಬಾಲಮಂದಿರಕ್ಕೆ ಮರಳಿ ಕರೆತಲಾಗಿದೆ; ಈ ಮಕ್ಕಳ ಹಕ್ಕುಗಳನ್ನು ಕಾಪಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;	ಜನವರಿ 2020 ರ ಅಂತ್ಯಕ್ಕೆ ಒಟ್ಟು 150 ಮಕ್ಕಳನ್ನು ಪತ್ತೆ ಹಚ್ಚಿ ಕಾಯ್ದೆ ನಿಯಮಾನುಸಾರ ಮಕ್ಕಳ ಪುನರ್ವಸತಿಗೆ ಕ್ರಮವಹಿಸಲಾಗಿರುತ್ತದೆ. ಮಕ್ಕಳು ಸಂಸ್ಥೆಗಳಿಗೆ ~~ದಾಖಲಾದ ಸಂದರ್ಭದಲ್ಲಿ ಸಮಾಲೋಚನೆಯನ್ನು~~ ಮಾಡಿಸಲು ಬಾಲಮಂದಿರಗಳಿಗೆ ಸಮಾಲೋಚಕರುಗಳನ್ನು ನೇಮಕ ಮಾಡುವುದರ ಮೂಲಕ ಬಾಲಮಂದಿರಗಳ ಕಟ್ಟಡಗಳಿಗೆ ಸೂಕ್ತ ಭದ್ರತಾ ವ್ಯವಸ್ಥೆಯನ್ನು (ಕಟ್ಟಡಕ್ಕೆ ಕಂಪೌಂಡು, ಪೋಲೀಸ್ ಬೀಟ್) ಕಲ್ಪಿಸುವುದರ ಮೂಲಕ, ಸಂಸ್ಥೆಗಳಿಗೆ ಸಿಸಿಟಿವಿ ಅಳವಡಿಸುವುದರ ಮೂಲಕ ಮತ್ತು ಮಕ್ಕಳನ್ನು ಚಟುವಟಿಕೆಯಿಂದಿರಸಲು ಮನೋರಂಜನಾ ಮತ್ತು ಆಟೋಪಕರಣಗಳನ್ನು ಒದಗಿಸುವುದರ ಮೂಲಕ ಮಕ್ಕಳಿಗೆ ಸೂಕ್ತ ವಾತಾವರಣವನ್ನು ಕಲ್ಪಿಸಲಾಗಿರುತ್ತದೆ.

ಈ.	ಬಾಲಮಂದಿರಗಳಿಂದ ಮಕ್ಕಳು ಓಡಿ ಹೋಗಲು ಕಾರಣಗಳೇನು; (ವಿವರ ನೀಡುವುದು)	ಮಕ್ಕಳು ಸಂಸ್ಥೆಯಿಂದ ತಪ್ಪಿಸಿಕೊಳ್ಳಲು ಈ ಕೆಳಕಂಡಂತೆ ಕಾರಣಗಳನ್ನು ಗುರುತಿಸಲಾಗಿದೆ: 1. ಮನೆಗೀಳು (ಹೋಮ್ ಸಿಕ್‌ನೆಸ್) 2. ಸಂಸ್ಥೆಯ ಶಿಸ್ತುಬದ್ಧ ವಾತಾವರಣಕ್ಕೆ ಹೊಂದಿಕೊಳ್ಳದಿರುವುದು. 3. ಬೇರೆ ರಾಜ್ಯದ ಮಕ್ಕಳು ದುಡಿಯಲು ಈ ರಾಜ್ಯಕ್ಕೆ ಬಂದಿದ್ದು, ರಕ್ಷಿಸಲ್ಪಟ್ಟು ಸಂಸ್ಥೆಗಳಿಗೆ ದಾಖಲಾದಂತಹ ಪ್ರಕರಣಗಳಲ್ಲಿ ತಪ್ಪಿಸಿಕೊಳ್ಳುವ ಸಾಧ್ಯತೆಯಿರುತ್ತದೆ. 4. ದುಶ್ಚಟಗಳಿಗೆ (ಗುಟ್ಕಾ, ಬೀಡಿ, ಮಾದಕ ದ್ರವ್ಯ) ಬಲಿಯಾಗಿದ್ದ ಮಕ್ಕಳು ಸಂಸ್ಥೆಯಲ್ಲಿ ಅವುಗಳಿಗೆ ಅವಕಾಶವಿಲ್ಲದ ಕಾರಣ.
ಉ.	ಸರ್ಕಾರಿ ಬಾಲಮಂದಿರಗಳಲ್ಲಿ ಸೂಕ್ತ ತರಬೇತಿ ಹೊಂದಿದ ಎಲ್ಲಾ ಹಂತದ ಸಿಬ್ಬಂದಿಗಳನ್ನು ನೇಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಸರ್ಕಾರಿ ಬಾಲಮಂದಿರಗಳಿಗೆ ಮಂಜೂರಾಗಿರುವ ಸಿಬ್ಬಂದಿಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಹಾಗೂ ಈ ನಿಯಮಗಳಲ್ಲಿ ನಿಗದಿಪಡಿಸಲಾಗಿರುವ ಕನಿಷ್ಠ ವಿದ್ಯಾರ್ಹತೆಯ ಪ್ರಕಾರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ನೇಮಕಾತಿಯಾದ ಸಿಬ್ಬಂದಿಗಳಿಗೆ ನಿಯಮಾನುಸಾರ ಸರ್ಕಾರದಿಂದ ನಿಗದಿಪಡಿಸಲಾದ ಆಡಳಿತ ತರಬೇತಿಗಳನ್ನು ನೀಡಲಾಗುತ್ತದೆ.

ಸಂ:ಮಮಇ 42 ಮಭಾಬ 2020

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಅನುಬಂಧ

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಅವರ ಪ್ರಶ್ನೆ ಸಂಖ್ಯೆ-468

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಬಾಲಮಂದಿರಗಳ ಹೆಸರು	2016-17		2017-18		2018-19		2019-20 (ಜನವರಿ ಅಂತ್ಯಕ್ಕೆ)	
			ಕಾಣೆಯಾದ ಮಕ್ಕಳ ಸಂಖ್ಯೆ	ಪತ್ತೆಯಾದವರ ಮಕ್ಕಳ ಸಂಖ್ಯೆ	ಕಾಣೆಯಾದ ಮಕ್ಕಳ ಸಂಖ್ಯೆ	ಪತ್ತೆಯಾದವರ ಮಕ್ಕಳ ಸಂಖ್ಯೆ	ಕಾಣೆಯಾದ ಮಕ್ಕಳ ಸಂಖ್ಯೆ	ಪತ್ತೆಯಾದವರ ಮಕ್ಕಳ ಸಂಖ್ಯೆ	ಕಾಣೆಯಾದ ಮಕ್ಕಳ ಸಂಖ್ಯೆ	ಪತ್ತೆಯಾದವರ ಮಕ್ಕಳ ಸಂಖ್ಯೆ
1.	ಬೆಂಗಳೂರು (ನ)	ಬಾಲಕರ ಬಾಲಮಂದಿರ	17	0	16	0	19	0	3	0
		ಮನೋವಿಕಲ ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	0	0
		ಶಿಶು ಮಂದಿರ	0	0	0	0	0	0	0	0
2	ಬೆಂಗಳೂರು (ಗ್ರಾ)	-	0	0	0	0	0	0	0	0
3	ಬಾಗಲಕೋಟೆ	ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	0	0	0	0	1	1	1	1
4	ಬಳ್ಳಾರಿ	ಬಾಲಕರ ಬಾಲಮಂದಿರ	8	6	8	7	4	3	5	4
		ಬಾಲಕಿಯರ ಬಾಲಮಂದಿರ	0	0	2	1	0	0	0	0
		ಮನೋವಿಕಲ ಬಾಲಕರ ಬಾಲಮಂದಿರ	0	0	1	0	3	0	0	0
5	ಬಿಜಾಪುರ	ಬಾಲಕರ ಬಾಲಮಂದಿರ (ಹಿರಿಯ)	0	0	0	0	0	0	0	0
		ಬಾಲಕರ ಬಾಲಮಂದಿರ (ಕಿರಿಯ)	7	3	0	0	1	0	0	0
		ಬಾಲಕಿಯರ ಬಾಲಮಂದಿರ	5	3	2	1	0	0	0	0
6	ಬೆಳಗಾವಿ	ಬಾಲಕರ ಬಾಲಮಂದಿರ	1	0	1	0	2	0	3	0
		ಬಾಲಕರ ಬಾಲಮಂದಿರ (ಖಾನಾಪುರ)	0	0	1	0	1	1	1	0
		ಬಾಲಕಿಯರ ಬಾಲಮಂದಿರ (ಸವದತ್ತಿ)	0	0	0	0	0	0	0	0
		ಪುರುಷರ ಅನುಪಾಲನಾ ಗೃಹ	0	0	0	0	0	0	0	0
7	ಬೀದರ್	ಬಾಲಕಿಯರ ಬಾಲಮಂದಿರ	1	0	0	0	0	0	1	0
		ಬಾಲಕರ ಬಾಲಮಂದಿರ	0	0	0	0	1	0	0	0
8	ಚಿಕ್ಕಮಗಳೂರು	ಬಾಲಕರ ಬಾಲಮಂದಿರ	2	1	2	2	0	0	2	1

9	ಚಿತ್ರದುರ್ಗ	ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	1	1
10	ಚಾಮರಾಜನಗರ	ಬಾಲಕರ ಬಾಲಮಂದಿರ	0	0	0	0	1	1	0	0
		ಬಾಲಕಿಯರ ಬಾಲಮಂದಿರ	2	2	0	0	0	0	0	0
11	ಚಿಕ್ಕಬಳ್ಳಾಪುರ	ಬಾಲಕಿಯರ ಬಾಲಮಂದಿರ	0	0	1	1	2	2	1	0
12	ಧಾರವಾಡ	ಬಾಲಕಿಯರ ಬಾಲಮಂದಿರ	**1**	**1**	**3**	**3**	**0**	**0**	**0**	0
		ಬಾಲಕರ ಬಾಲಮಂದಿರ (ಉಣಗಲ್)	**5**	**3**	**3**	**2**	**2**	**1**	**6**	3
		ಮನೋವಿಕಲ ಬಾಲಕಿಯರ ಬಾಲಮಂದಿರ	**0**	**0**	**0**	**0**	**0**	**0**	**0**	0
13	ದಾವಣಗೆರೆ	ಬಾಲಕರ ಬಾಲಮಂದಿರ	0	0	4	0	1	0	0	0
		ಬಾಲಕಿಯರ ಬಾಲಮಂದಿರ	0	0	2	0	0	0	0	0
14	ದಕ್ಷಿಣ ಕನ್ನಡ	ಬಾಲಕರ ಬಾಲಮಂದಿರ	15	13	1	1	3	3	4	4
15	ಗುಲ್ಬರ್ಗಾ	ಬಾಲಕಿಯರ ಬಾಲಮಂದಿರ	1	1	2	2	0	0	0	0
		ಬಾಲಕರ ಬಾಲಮಂದಿರ	0	0	0		0	0	0	0
		ಮನೋವಿಕಲ ಬಾಲಕರ ಬಾಲಮಂದಿರ	0	0	0	0	0	0	0	0
16	ಗದಗ	ಬಾಲಕರ ಬಾಲಮಂದಿರ	**8**	**4**	**1**	**0**	**1**	**1**	**1**	**1**
		ಬಾಲಕಿಯರ ಬಾಲಮಂದಿರ	**1**	**1**	**0**	**0**	**0**	**0**	**0**	**0**
17	ಹಾವೇರಿ	ಬಾಲಕರ ಬಾಲಮಂದಿರ	0	0	1	1	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	0	0
18	ಹಾಸನ	ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	0	0
19	ಕೊಪ್ಪಳ	ಬಾಲಕರ ಬಾಲಮಂದಿರ	2	2	3	1	2	2	0	0
		ಬಾಲಕಿಯರ ಬಾಲಮಂದಿರ	0	1	0	0	0	0	0	0
20	ಕೊಡಗು	ಬಾಲಕರ ಬಾಲಮಂದಿರ	0	0	1	1	2	0	0	0
		ಬಾಲಕಿಯರ ಬಾಲಮಂದಿರ	0	0	2	2	0	0	0	0
21	ಕೋಲಾರ	ಬಾಲಕರ ಬಾಲಮಂದಿರ	5	3	3	3	1	0	2	2
		ಬಾಲಕಿಯರ ಬಾಲಮಂದಿರ	0	0	0	0	0	0	0	0
22	ಮಂಡ್ಯ	ಬಾಲಕರ ಬಾಲಮಂದಿರ	0	4	0	0	0	0	1	0

		ಬಾಲಕಿಯರ ಬಾಲಮಂದಿರ	1	1	0	0	0	0	0	0
23	ಮೈಸೂರು	ಬಾಲಕರ ಬಾಲಮಂದಿರ	12	9	5	4	5	3	5	4
		ಬಾಲಕಿಯರ ಬಾಲಮಂದಿರ	10	8	2	2	2	1	5	4
24	ರಾಮನಗರ	ಬಾಲಕಿಯರ ಬಾಲಮಂದಿರ	0	0	0	0	0	0	0	0
25	ರಾಯಚೂರು	ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	0	0
26	ಶಿವಮೊಗ್ಗ	ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	0	0
27	ತುಮಕೂರು	ಬಾಲಕರ ಬಾಲಮಂದಿರ	0	0	0	0	0	0	0	0
		ಬಾಲಕಿಯರ ಬಾಲಮಂದಿರ	2	1	0	0	3	3	0	0
28	ಉಡುಪಿ	ಬಾಲಕಿಯರ ಬಾಲಮಂದಿರ	0	0	0	0	0	0	0	0
29	ಉತ್ತರ ಕನ್ನಡ	ಬಾಲಕರ ಬಾಲಮಂದಿರ	0	0	1	1	0	0	0	0
		ಬಾಲಕಿಯರ ಬಾಲಮಂದಿರ	0	0	0	0	0	0	1	1
30	ಯಾದಗಿರಿ	ಬಾಲಕಿಯರ ಬಾಲಮಂದಿರ	0	0	1	0	0	0	0	0
	ಒಟ್ಟು		106	67	69	35	57	22	43	26

ವರ್ಷ	ಕಾಣೆಯಾದವರು	ಪತ್ತೆಯಾದವರು
2016-17	106	67
2017-18	69	35
2018-19	57	22
2019-20	43	26
ಒಟ್ಟು	**275**	**150**